ಸಾಕ್ಷಿಯ ಹೆಸರುಃ ರೋಚನ್ ಎಂ ಕೆ

ದಿನಾಂಕಃ **13-06-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲುಃ 3 ನೇ ಪ್ರತಿವಾದಿಯ ಪರ ಶ್ರೀ ಬಿ ಕೆ ಎನ್ ವಕೀಲರಿಂದಃ**

ನಾನು ಮೆಟಿರೀಯಲ್ ಕಾಂಟ್ರಾಕ್ಟ್ ಪಡೆದು ಕಾಂಟ್ರಾಕ್ಟ್ ಕೆಲಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ ಈ ಕೆಲಸ ಮಾಡುತ್ತೇನೆ. ನಾನು ಈ ಕೆಲಸ ಮಾಡುವಾಗ ಸಂಪೂರ್ಣವಾಗಿ ಬ್ಯೂಸಿಯಾಗಿರುತ್ತೇನೆ ಎಂದರೆ ಸಾಕ್ಷಿ ವಾರಕ್ಕೆ ಒಂದು ಅಥವಾ ಎರಡು ದಿನ ಬ್ಯೂಸಿಯಾಗಿರುತ್ತೇನೆ ಎನ್ನುತ್ತಾರೆ. ನಾನು ಬೆಂಗಳೂರಿನ ಬಣಸವಾಡಿಯಲ್ಲಿ ತಾತ್ಕಾಲಿಕವಾಗಿ ವಾಸವಾಗಿರುತ್ತೇನೆ. ನನ್ನ ಹೆಂಡತಿ ಮಕ್ಕಳು ಅದೇ ವಿಳಾಸದಲ್ಲಿ ವಾಸವಾಗಿದ್ದಾರೆ. ನನ್ನ ಒಟ್ಟು ಕುಟುಂಬದ ಆಸ್ತಿಗಳೆಲ್ಲಾ ಮಿರ್ಲೆ ಗ್ರಾಮದಲ್ಲಿ ಇವೆ. ಆ ನಿರ್ವಹಣೆಯನ್ನು ನಾನೇ ಮಾಡುತ್ತಿದ್ದೇನೆ. ಮಿರ್ಲೆ ಗ್ರಾಮದಲ್ಲಿ ಇರುವ ನಮ್ಮ ಒಟ್ಟು ಕುಟುಂಬದ ಆಸ್ತಿ ಸುಮಾರು 9 ರಿಂದ 10 ಎಕರೆ ಇದೆ. ಈ 10 ಎಕರೆ ಜಮೀನಿನಲ್ಲಿ ಮೂರುವರೆ ಎಕರೆ ತೋಟ ಇದ್ದು ಉಳಿದದ್ದು ಗದ್ದೆ ಇದೆ. ಮೂರೂವರೆ ಎಕರೆ ಜಮೀನಿನಲ್ಲಿ ಅಡಿಕೆ ಮತ್ತು ತೆಂಗು ಬೆಳೆಯುತ್ತೇನೆ. ಇದರಿಂದ ವಾರ್ಷಿಕವಾಗಿ 40 ರಿಂದ 50 ಸಾವಿರ ಆದಾಯ ಬರುತ್ತದೆ. ಸಾಕ್ಷಿ ಮುಂದುವರೆದು ಅಡಿಕೆಯಿಂದ 40 ರಿಂದ 50 ಸಾವಿರ ಆದಾಯ ಬರುತ್ತದೆ ಎನ್ನುತ್ತಾರೆ. ತೋಟದಲ್ಲಿರುವ ಎಲ್ಲಾ ಅಡಿಕೆ ಮತ್ತು ತೆಂಗು ಫಲವನ್ನು ಕೊಡುತ್ತಿವೆ. ಆದ್ದರಿಂದ ಭಾಗಾಯ್ತು ಜಮೀನಿನ ವಾರ್ಷಿಕವಾಗಿ ಒಟ್ಟು ಆದಾಯ ರೂ 90 ಸಾವಿರ ಎಂದರೆ ಸರಿ.

ನಮ್ಮ ಭಾಗಾಯ್ತು ಜಮೀನಿನಲ್ಲಿರುವ ಒಟ್ಟು ಅಡಿಕೆ ಮತ್ತು ತೆಂಗಿನ ಸಸಿಗಳನ್ನು ನಾಟಿದ್ದೆವು ಎಂದು ನೆನಪಿಲ್ಲ ಕಾರಣ ಆಗ ನಾನು ಚಿಕ್ಕವನಿದ್ದು ಈಗ ನಾನು ತೋಟ

ನಿರ್ವಹಣೆ ಮಾಡುತ್ತಿದ್ದೇನೆ. ಒಂದು ಎಕರೆ ಭಾಗಾಯ್ತು ಜಮೀನಿಗೆ 450 ರಿಂದ 500 ಅಡಿಕೆ ಸಸಿಗಳನ್ನು ನಾಟಿ ಮಾಡಬಹುದು ಎಂದರೆ ಸರಿಯಲ್ಲ. ಅದೇ ರೀತಿ ಒಂದು ಎಕರೆ ಜಮೀನಿಗೆ ಸುಮಾರು 30 ತೆಂಗಿನ ಸಸಿಗಳನ್ನು ನಾಟಿ ಮಾಡಬಹುದು ಎಂದರೆ ಸಾಕ್ಷಿ ಮಾಡಬಹುದು ಎನ್ನುತ್ತಾರೆ. ಒಂದು ಎಕರೆ ಜಮೀನಿನಲ್ಲಿ ಜಾಗ ಕಡಿಮೆ ಬಿಟ್ಟರೆ ಸುಮಾರು 40 ರಿಂದ 45 ತೆಂಗಿನ ಸಸಿಗಳನ್ನು ನಾಟಿ ಮಾಡಬಹುದು ಎಂದರೆ ಸಾಕ್ಷಿ ಮಾಡಬಹುದು ಎನ್ನುತ್ತಾರೆ. ಇತ್ತೀಚೆಗೆ ಅಂದರೆ 8-10 ವರ್ಷಗಳಿಂದ ನಮ್ಮ ಕುಟುಂಬದಲ್ಲಿ ಒಟ್ಟು 9 ರಿಂದ 10 ಎಕರೆ ಜಮೀನನ್ನು ಹೊಂದಿರುತ್ತೇವೆ. ಈ ಕೊಂಡಿರುವ ಜಮೀನುಗಳ ಮೌಲ್ಯ ಒಂದು ಎಕರೆಗೆ ಒಂದೂವರೆ ಲಕ್ಷ ಇರುತ್ತದೆ.

ನಮ್ಮ ಒಟ್ಟು ಕುಟುಂಬದ ಜಮೀನಿನಲ್ಲಿ ನಾವು ಭತ್ತ ಬೆಳೆಯುವುದಿಲ್ಲ ಕಬ್ಬು ಬೆಳೆಯುತ್ತೇವೆ. ಒಂದು ಎಕರೆಗೆ 70 ರಿಂದ 80 ಟನ್ ಕಬ್ಬನ್ನು ಬೆಳೆಯುತ್ತೇವೆ. ಒಂದು ಟನ್ ಕಬ್ಬಿನ ಬೆಳೆ 2800 ರೂ ಇದೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಅದೇ ರೀತಿ ಒಂದು ಎಕರೆ ಜಮೀನಿಗೆ 30 ರಿಂದ 40 ಕ್ವಿಂಟಾಲ್ ಭತ್ತ ಬೆಳೆಯಬಹುದು. ಈ ಎಪಿಎಂಸಿ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಾಲ್ ಭತ್ತವನ್ನು 2800 ರೂ ಗೆ ಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ನಾನು ಭತ್ತ ಬೆಳೆಯದೇ ಇರುವುದರಿಂದ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎರಡು ವರ್ಷದ ಬೆಳೆಯಲ್ಲಿ ಜಮೀನನ್ನು ಕೊಳ್ಳಬಹುದಾಗಿರುವುದರಿಂದ ನಾನು ಹೇಳುವಷ್ಟು ಮೌಲ್ಯ ಅಂದರೆ ಒಂದೂವರೆ ಲಕ್ಷ ರೂ ಗಳಿಗೆ ಯಾರೂ ಜಮೀನನ್ನು ಮಾರಾಟ ಮಾಡುವುದಿಲ್ಲ ಎಂದರೆ ಸಾಕ್ಷಿ ನಾನು ಕೊಂಡಿರುವ ಜಮೀನು ಬರಡು ಜಮೀನಾಗಿದ್ದು ಅಲ್ಲಿ ಈಗ ಯಾವುದೇ ಬೆಳೆ ಬೆಳೆದಿರುವುದಿಲ್ಲ ಎನ್ನುತ್ತಾರೆ.

ನಾನು ನಿಪಿ 1 ನ್ನು ಮಾಡಿಕೊಳ್ಳುವಾಗ ದಾವಾ ಸ್ವತ್ತಿನ ಖಾತೆ 1 ನೇ ಪ್ರತಿವಾದಿ ಹಾಗೂ ಅವರ ವಾರಸುದಾರರ ಹೆಸರಿನಲ್ಲಿ ಇತ್ತು. ಆಗ 1 ನೇ ಪ್ರತಿವಾದಿ ಭಾಗ್ಯಮ್ಮ ಅವರ ಮಕ್ಕಳಾದ ರಾಜೇಗೌಡ ಮತ್ತು ಪಾರ್ವತಿಯವರ ಹೆಸರಿನಲ್ಲಿ ಖಾತೆ ಇತ್ತು. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. 2 ನೇ ಪ್ರತಿವಾದಿ ಪಾರ್ವತಿ ತೀರಿಕೊಂಡಿರುತ್ತಾರೆ. ಪಾರ್ವತಿಯವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಪಾರ್ವತಿಯ ಗಂಡನ ಹೆಸರು ಗೊತ್ತು, ಆದರೆ ಅವರ ಮಕ್ಕಳು ಹೆಸರು ಮರೆತು ಹೋಗಿರುತ್ತದೆ. ಅವರ ಬಗ್ಗೆ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೆ.

ದಾವಾ ಸ್ವತ್ತಿನಲ್ಲಿ ಸರ್ವೆ ನಂ. 41/1, 41/2, 43/1, 44/1 ಮತ್ತು ಸರ್ವೆ ನಂ. 14 ರಲ್ಲಿ ಒಟ್ಟು 3 ಎಕರೆ 23 ಗುಂಟೆ ಜಮೀನು ಇರುತ್ತದೆ. ಈ ಸ್ವತ್ತುಗಳ ಚೆಕ್ಕುಬಂದಿಗಳು ನನಗೆ ಜ್ಞಾಪಕವಿಲ್ಲ. ಪ್ರತಿ ಸರ್ವೆ ನಂಬರಿನ ಸ್ವತ್ತುಗಳ ಪ್ರತ್ಯೇಕವಾದ ವಿಸ್ತೀರ್ಣ ಗೊತ್ತಿಲ್ಲ. ಈ ಭೂಮಿ ನುರುಜು ಕಲ್ಲು ಮಣ್ಣನ್ನು ಹೊಂದಿದೆ. ಈ ಭೂಮಿ ಕೆಂಪು ಮಣ್ಣು (ಕೆಬ್ಬೆ ಮಣ್ಣು) ಹೊಂದಿದೆ ಎಂದರೆ ಸಾಕ್ಷಿ ಸ್ವಲ್ಪ ಭಾಗ ಮಾತ್ರ ಕೆಂಪು ಮಣ್ಣು ಇದೆ ಎನ್ನುತ್ತಾರೆ. ಈ ಜಮೀನಿನಲ್ಲಿ ಪ್ರತಿವಾದಿಯರು ಒಂದು ಬೋರ್ ವೆಲ್ ತೆಗೆಸಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಅದೇ ರೀತಿ 50 ಕ್ಕಿಂತ ಹೆಚ್ಚು ತೆಂಗಿನ ಮರಗಳನ್ನು ನಾಟಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಿ ಇವೇ ಆ ತೆಂಗಿನ ಮರಗಳನ್ನು ದಾವಾ ಸ್ವತ್ತಿನಲ್ಲಿ ಬೆಳೆಯಲಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಎರಡು ಪೋಟೋಗಳನ್ನು ಈಗ ನಿಡಿ 1 ಮತ್ತು 2 ಎಂದು ಅವುಗಳಿಗೆ ಸಂಬಂಧಿಸಿದ ಸಿಡಿಯನ್ನು ನಿಡಿ 3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಒಂದು ರಶೀತಿಯನ್ನು ತೋರಿಸಿ ಅದರ ಅನ್ವಯ ಪ್ರತಿವಾದಿಗಳು ದಿಃ 19-11-2001 ರಲ್ಲಿ ಬೋರ್ ವೆಲ್ ತೆಗೆಸಿದ ಹಣ ಪಾವತಿಯ ರಶೀತಿ ಎಂದು ತೋರಿಸಿದಾಗ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. 2002 ರಲ್ಲಿಯೇ ಭಾಗ್ಯಮ್ಮ ಈ ಜಮೀನಿನಲ್ಲಿ ನೀರಿನ ಸಂಪರ್ಕ ಹೊಂದಿರುತ್ತಾರೆ ಎಂದು ಗ್ರಾಮ ಲೆಕ್ಕಾಧಿಕಾರಿಗಳು ನೀರು ಹಕ್ಕುದಾರಿಕೆ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಿಃ 19-11-2001 ರಂದು ವಿನಯ್ ಬೋರ್ ವೆಲ್ಸ್ ನವರು ದಾವಾ ಸ್ವತ್ತಿನಲ್ಲಿ ಬೋರ್ ತೆಗೆದ ಬಗ್ಗೆ ಬೋರ್ ವೆಲ್ ಕಂಪ್ಲೀಷನ್ ರಿಪೋರ್ಟ್ ನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರೀ ವರದಿಯಲ್ಲಿ 200 ಅಡಿ ಡ್ರಿಲ್ಲಿಂಗ್ ಮಾಡಿದ್ದು, 60 ಅಡಿಗೆ ಕೇಸಿಂಗ್ ಪೈಪ್ ಅಳವಡಿಸಲಾಗಿದೆ ಎಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವರದಿಯಲ್ಲಿ 3850 ಗ್ಯಾಲಿನ್ ನೀರು ಇದೆ ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವರದಿಯಲ್ಲಿ 5 ಹೆಚ್ ಬಿ ಮೋಟರನ್ನು ಮತ್ತು ಸಬ್ ಮರ್ಸಿಬಲ್ ಪಂಪ್ ನ್ನು ಅಳವಡಿಸಬೇಕೆಂದು ಎಂದು ಶಿಫಾರಸ್ಸು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 44/1 ರ ಪಹಣಿ ಪತ್ರಿಕೆಯಲ್ಲಿ ಕಾಲಂ ನಂ. 13 ರಲ್ಲಿ ತೆಂಗು ಎಂದು ಬರೆಯಲಾಗಿದೆ ಎಂದರೆ ಸರಿ. ಆದ್ದರಿಂದ ಈ ಸರ್ವೆ ನಂಬರಿನಲ್ಲಿರುವ ಜಮೀನು ಬಂಜರು ಜಮೀನು ಅಲ್ಲ ಭಾಗಾಯ್ತು ಜಮೀನು ಎಂದರೆ ಸಾಕ್ಷಿ ಒಂದು ಭಾಗ ಮಾತ್ರ ಭಾಗಾಯ್ತು ಇದೆ ಎನ್ನುತ್ತಾರೆ. ಒಟ್ಟು ದಾವಾ ಸ್ವತ್ತಿನ ಪೈಕಿ 30 ಗುಂಟೆ ಜಮೀನು ಭಾಗಾಯ್ತು ಇರಬಹುದು. ಮೇಲೆ ಹೇಳಿದ ನೀರಿನ ಸಂಪರ್ಕದಿಂದ ತೆಂಗಿನ ತೋಟ ಬೆಳೆಯಲಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಯಾವುದೇ ಬಂಜುರು ಜಮೀನಿನಲ್ಲಿ ನೀರಿನ ಸಹಾಯ ಇಲ್ಲದೇ ತೋಟ ಮಾಡಲು

ಆಗುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದ ದಾಖಲೆಗಳ ಆಧಾರದ ಅನ್ವಯ ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ನ್ನು ತೆಗೆಸಿ ತೆಂಗಿನ ತೋಟವನ್ನು ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ನಿಡಿ 1 ಮತ್ತು 2 ಫೋಟೋದಲ್ಲಿರುವ ತೆಂಗಿನ ಮರಗಳು ಈಗ ಫಲ ನೀಡುವ ಸ್ಥಿತಿಯಲ್ಲಿ ಇವೆ ಎಂದರೆ ಸಾಕ್ಷಿ ಎಲ್ಲಾ ಮರಗಳು ಇಲ್ಲ ಎನ್ನುತ್ತಾರೆ. ಈ ಜಮೀನಿನಲ್ಲಿರುವ ಎಷ್ಟು ಮರಗಳು ಫಲಗಳು ನೀಡುತ್ತವೆ ಮತ್ತು ಎಷ್ಟು ನೀಡುವುದಿಲ್ಲ ಎಂದು ನಿಖರವಾದ ಮಾಹಿತಿ ಇಲ್ಲ. ನಿಡಿ 1 ಮತ್ತು 2 ರಲ್ಲಿರುವ ಮರಗಳು ಹಾಗೂ ಇತರೆ ಮರಗಳು ಈಗ ಫಲ ನೀಡುತ್ತಿವೆ ಎಂದರೆ ಸಾಕ್ಷಿ ಹಾಗೆ ಕಾಣುತ್ತಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಒಂದು ತೆಂಗಿನ ಮರದಲ್ಲಿ ವಾರ್ಷಿಕವಾಗಿ 400 ರಿಂದ 500 ಕಾಯಿಗಳು ಬರುತ್ತವೆ ಎಂದರೆ ಸರಿಯಲ್ಲ. ಒಂದು ತೆಂಗಿನ ಸಸಿ ಒಂದು ಬಾರಿಗೆ 30 ರಿಂದ 40 ತೆಂಗಿನ ಕಾಯಿಗಳನ್ನು ಕೊಡಬಹುದು. ಸಾಮಾನ್ಯವಾಗಿ ಒಂದು ತೆಂಗಿನ ಸಸಿಯಿಂದ ಮೂರು ಬಾರಿ ತೆಂಗಿನ ಕಾಯಿಗಳನ್ನು ಕೀಳಬಹುದು ಸಾಕ್ಷಿ ಮುಂದುವರೆದು ಅದು ಆ ಜಮೀನಿನ ಫಲವತ್ತತೆ ಮತ್ತು ನೀರಿನ ಲಭ್ಯತೆ ಮೇಲೆ ಅವಲಂಬಿತವಾಗಿದೆ ಎನ್ನುತ್ತಾರೆ.

ನನ್ನ ತಾಯಿಯ ಹೆಸರು ಶೋಭಾ. ಅವರು ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿದ್ದರು ಎಂದರೆ ಸಾಕ್ಷಿ 2019 ರಲ್ಲಿ ಸದಸ್ಯರಾಗಿದ್ದರು ಎನ್ನುತ್ತಾರೆ. ನಾನು ಆದಾಯ ತೆರಿಗೆ ಸಂದಾಯ ಮಾಡುತ್ತೇನೆ. ನಿಪಿ 1 ರ ಕುರಿತು ಆದಾಯ ತೆರಿಗೆ ಸಂದಾಯ ಮಾಡುವಾಗ ತಿಳಿಸಿರುತ್ತೇನೆ. ಈ ರೀತಿ ಆದಾಯ ತೆರಿಗೆ ಸಂದಾಯ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸುಮಾರು 20 ವರ್ಷಗಳ ಹಿಂದೆ ನನ್ನ ತಾಯಿ ಸ್ಟಾಂಪ್ ವೆಂಡಿಂಗ್ ಕೆಲಸ ಮಾಡುತ್ತಿದ್ದರು.

ಪ್ರತಿವಾದಿಗಳಿಗೆ ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳು ಇಲ್ಲ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ಒಂದು ಬೋರ್ ತೆಗೆಯಲು ಬೇರೆ ಲೈನಿಂದ ಕನೆಕ್ಷನ್ ಪಡೆಯಲು ಕಂಬಗಳನ್ನು ಹಾಕಬೇಕಾಗುತ್ತದೆ ಮತ್ತು ವಿದ್ಯುತ್ ವಿಭಾಗಕ್ಕೆ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ, ಪೈಪ್‌ಗಳನ್ನು ಅಳವಡಿಸಬೇಕಾಗುತ್ತದೆ, ಬೋರ್ ಗೆ ಮೋಟಾರ್ ತೆಗೆದು ಕೊಳ್ಳಬೇಕಾಗುತ್ತದೆ, ಸಾಮಾನ್ಯವಾಗಿ ಇಷ್ಟು ಕೆಲಸ ಮಾಡಲು ರೂ ಎರಡರಿಂದ ಎರಡೂವರೆ ಲಕ್ಷ ಹಣ ಖರ್ಚು ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ 60 ರಿಂದ 70 ಸಾವಿರ ಖರ್ಚಾಗಬಹುದು ಎನ್ನುತ್ತಾರೆ. ದಾವಾ ಸ್ವತ್ತುಗಳ ಪೈಕಿ ಸರ್ವೆ ನಂ. 43/1, 44/1, 44/2, 41/1 ಹಾಗೂ ಸರ್ವೆ ನಂ. 14 ರ ಆಸ್ತಿಯ ಪಕ್ಕದಲ್ಲಿ ಒಂದು ಕ್ಯಾನಲ್ ಹಾದು ಹೋಗುತ್ತದೆ ಎಂದರೆ ಸಾಕ್ಷಿ ಸ್ವಲ್ಪ ದೂರದಲ್ಲಿ ಇದೆ ಎನ್ನುತ್ತಾರೆ. ಪ್ರಯತ್ನ ಮಾಡಿದರೆ ಈ ಕ್ಯಾನಲ್ ನಿಂದ ನೀರು ಪಡೆಯಬಹುದು ಎಂದರೆ ಸರಿ. ಈ ಸ್ವತ್ತುಗಳು ರಸ್ತೆಗೆ ಹತ್ತಿರವಾಗಿವೆ ಎಂದರೆ ಸಾಕ್ಷಿ ರಸ್ತೆಯಿಂದ ಒಳಗೆ ಇವೆ ಎನ್ನುತ್ತಾರೆ ಹಾಗೂ ಈ ಸ್ವತ್ತುಗಳಿಗೆ ಯಾವುದೇ ರಸ್ತೆ ಸಂಪರ್ಕ ಇಲ್ಲ ಎನ್ನುತ್ತಾರೆ.

ಈಗ ಪ್ರತಿವಾದಿಯರು ದಾವಾ ಸ್ವತ್ತಿಗೆ ಹೋಗಲು ಬರಲು ಕಾಲು ದಾರಿ ಬಳಸುತ್ತಿದ್ದಾರೆ. ಅವರು ಪಕ್ಕದ ಸರ್ವೆ ನಂಬರ್ ನಲ್ಲಿ ಓಡಾಡುತ್ತಾರೆ. ಅದೇ ರಸ್ತೆಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಮೇಲೆ ಹೇಳಿದ ಸರ್ವೆ ನಂಬರ್ ನಲ್ಲಿ ಪೋಡಾಗಿರುವ ಸರ್ವೆ ನಂಬರ್ ನಲ್ಲಿರುವ ಬೇರೆ ಜಮೀನುಗಳ ಮೇಲೆ ಓಡಾಡುತ್ತಾರೆ. ಭಾಗ್ಯಮ್ಮ ಮತ್ತು ರಾಜೇಗೌಡ ಅನಕ್ಷರಸ್ಥರು ಎಂದರೆ ಸಾಕ್ಷಿ ಭಾಗ್ಯಮ್ಮ ಅನಕ್ಷರಸ್ಥೆ

ಇರಬಹುದು ಆದರೆ ರಾಜೇಗೌಡ ಅಕ್ಷರಸ್ಥ ಎನ್ನುತ್ತಾರೆ. ನಾನು ದಾವಾ ಸ್ವತ್ತುಗಳ ಕ್ರಯದ ಕರಾರುಪತ್ರ ಮಾಡಿಕೊಳ್ಳುವಾಗ ಅವುಗಳಿಗೆ ಸಂಬಂಧಿಸಿದಂತೆ ಆರ್ ಟಿ ಸಿ ಗಳನ್ನು ನೋಡಿರುತ್ತೇನೆ. ನಾನು ದಾವಾ ಸ್ವತ್ತುಗಳನ್ನು ಕ್ರಯಕ್ಕೆ ಕೊಳ್ಳುವ ಮೊದಲು ಅಂದರೆ ಕ್ರಯದ ಕರಾರುಪತ್ರ ಮಾಡಿಕೊಳ್ಳುವ ಮೊದಲು ಕಾನೂನು ಅಭಿಪ್ರಾಯ ಪಡೆದಿರುತ್ತೇನೆ. ನಾನು ಸದರೀ ಅಭಿಪ್ರಾಯವನ್ನು ಲಿಖಿತ ರೂಪದಲ್ಲಿ ಪಡೆದಿಲ್ಲ ಆದರೆ ದಾಖಲೆಗಳನ್ನು ತೋರಿಸಿ ಅವರಿಂದ ಮಾಹಿತಿ ಪಡೆದಿರುತ್ತೇನೆ. ಆ ವಕೀಲರ ಹೆಸರು ದಯಾನಂದ್. ಅವರು ಈ ಕೇಸಿನಲ್ಲಿರುವ ವಕೀಲರು ಎಂದರೆ ಸರಿ.

ನಾನು ದಾವಾ ಸ್ವತ್ತಿಗೆ ವ್ಯವಹಾರ ಮಾಡುವ ಮುನ್ನ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲ. ಬಡ್ಡಿ ಹಣಕ್ಕಾಗಿ ವ್ಯವಹಾರ ಮಾಡಿದ್ದರಿಂದ, ನಾನು ಕಾನೂನು ಅಭಿಪ್ರಾಯ ಪಡೆದಿಲ್ಲ ಮತ್ತು ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಂದು ಕೊಟ್ಟ ದಾಖಲೆಗಳ ಆಧಾರದ ಮೇಲೆ ನಾನು ದಾವಾ ಪತ್ರದಲ್ಲಿ ದಾವಾ ಸ್ವತ್ತುಗಳ ಚೆಕ್ಕುಬಂದಿಯನ್ನು ನಮೂದಿಸಿರುತ್ತೇನೆ. ಪ್ರತಿವಾದಿಯರು ಸರ್ವೆ ಸ್ಕೆಚ್ ಗಳನ್ನು ತಂದು ಕೊಟ್ಟ ಆಧಾರದ ಮೇಲೆ ಚೆಕ್ಕುಬಂದಿ ನಮೂದಿಸಿರುತ್ತೇನೆ. ಪ್ರತಿವಾದಿಯರು ತಮ್ಮ ಬಳಿ ಇದ್ದ ಸರ್ವೆ ದಾಖಲೆಗಳನ್ನು ತಂದು ಕೊಟ್ಟಿದ್ದರು. ಆ ಸರ್ವೆ ಯಾರು ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರೀ ಸರ್ವೆ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ಆ ಸರ್ವೆ ನಕ್ಷೆಯನ್ನು ನಮಗೆ ತೋರಿಸಿದ್ದರು ಆದರೆ ನಮ್ಮ ಕೈಗೆ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ ಗಳು ಮತ್ತು ಚೆಕ್ಕುಬಂದಿ ಒಂದಕ್ಕೊಂದು ತಾಳೆ ಇಲ್ಲ ಎಂದರೆ ಸಾಕ್ಷಿ ಮಾರಾಟಗಾರರು ಕೊಟ್ಟ ಮಾಹಿತಿ ಆಧಾರದ ಮೇಲೆ ಬರೆದಿರುತ್ತೇವೆ ಎನ್ನುತ್ತಾರೆ.

ನಾನು ದಾವಾ ಸ್ವತ್ತುಗಳ ಚೆಕ್ಕುಬಂದಿಯನ್ನು ಪರಿಶೀಲನೆ ಮಾಡಿಲ್ಲ ಕಾರಣ ಕ್ರಯ ಪತ್ರ ಮಾಡುವಾಗ ಅವುಗಳನ್ನು ಪರಿಶೀಲನೆ ಮಾಡಬೇಕಾಗಿರುತ್ತದೆ.

ನಾನು ವಾಸ್ತವಿಕವಾಗಿ ಸ್ಥಳ ಪರಿಶೀಲನೆ ಮಾಡಿದ್ದರೆ ನನಗೆ ದಾವಾ ಸ್ವತ್ತುಗಳ ಚೆಕ್ಕುಬಂದಿ, ಬೆಳೆ ಮತ್ತು ವಾಸ್ತವಿಕತೆ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿ ಚೆಕ್ಕುಬಂದಿ ಹೊರತುಪಡಿಸಿ ಉಳಿದ ಮಾಹಿತಿ ಗೊತ್ತು ಎನ್ನುತ್ತಾರೆ. ನಿಪಿ 1 ರಲ್ಲಿ ಜಮೀನು ಭಾಗಾಯ್ತು ಇದೆ ಎಂದು ನಮೂದಿಸಿಲ್ಲ ಕಾರಣ ಎಲ್ಲಾ ಸರ್ವೆ ನಂಬರಿನಲ್ಲಿರುವ ಜಮೀನುಗಳು ಭಾಗಾಯ್ತು ಆಗಿರುವುದಿಲ್ಲ. ಸಾಕ್ಷಿಗೆ ಈಗ ಸರ್ವೆ ನಂ. 43/3 ರ ಪಹಣಿ ಪತ್ರಿಕೆಯನ್ನು ತೋರಿಸಿ ಇದರಲ್ಲಿ ಭಾಗಾಯ್ತು ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಈಗ ಹೊಸದಾಗಿ ಈ ಸರ್ವೆ ನಂಬರ್ ಪೋಡಾಗಿ ಸರ್ವೆ ನಂ. 43/1 ಎಂದು ದುರಸ್ತಿ ಆಗಿದೆ ಎನ್ನುತ್ತಾರೆ. ಇದೇ ಸರ್ವೆ ನಂಬರಿನಲ್ಲಿ ತೆಂಗಿನ ಸಸಿಗಳನ್ನು ನಾಟಿ ಮಾಡಲಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ನಿಖರವಾಗಿ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಸ್ಥಳವನ್ನು ಸರಿಯಾಗಿ ಪರಿಶೀಲನೆ ಮಾಡದೇ ಇರುವುದರಿಂದ ನನಗೆ ನಿಖರತೆ ಇಲ್ಲ ಎಂದರೆ ಸಾಕ್ಷಿ ನಾಲ್ಕೈದು ಸರ್ವೆ ನಂಬರ್ ಗಳಲ್ಲಿ ಕ್ರಯದ ಕರಾರು ಮಾಡಿದ್ದರಿಂದ ಯಾವ ಸರ್ವೆ ನಂಬರಿನಲ್ಲಿ ನಿಖರವಾಗಿ ತೆಂಗಿನ ಸಸಿ ನಾಟಿ ಮಾಡಲಾಗಿದೆ ಎಂದು ಹೇಳಲು ಬರುವುದಿಲ್ಲ ಎನ್ನುತ್ತಾರೆ.

2019 ನೇ ಇಸವಿಯಲ್ಲಿ ಭಾಗ್ಯಮ್ಮ ನವರು ನನ್ನನ್ನು ಸಂಪರ್ಕಿಸಿದ್ದರು. ಅವರು ಜನವರಿಯಿಂದ ಮಾರ್ಚ್ ತಿಂಗಳ ಒಳಗೆ 2019 ನೇ ಇಸವಿಯಲ್ಲಿ ಸಂಪರ್ಕಿಸಿದ್ದರು. ಬೀಚನಹಳ್ಳಿ ಕೊಪ್ಪಲು ಗ್ರಾಮ ಮತ್ತು ಮಿರ್ಲೆ ಗ್ರಾಮ ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ನನ್ನ ತಾಯಿ ರಾಜಕೀಯ ವ್ಯಕ್ತಿ ಆದ್ದರಿಂದ ಜನ ಸಂಪರ್ಕ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಮತ್ತು ಪ್ರತಿವಾದಿಗಳು ವಿಶ್ವಾಸ ದಿಂದ ಇದ್ದರು ಎಂದರೆ ಸಾಕ್ಷಿ ಸಂಪರ್ಕ

ದಲ್ಲಿ ಇದ್ದರು ಎನ್ನುತ್ತಾರೆ. ಪ್ರತಿವಾದಿಗಳಿಗೆ ಹಣದ ಅವಶ್ಯಕತೆ ಇದ್ದುದ್ದರಿಂದ ನನ್ನ ತಾಯಿಯವರು ಅವರಿಗೆ ಆಗಾಗ್ಗೆ ಹಣದ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ರಜಾ ದಿನಗಳಲ್ಲಿ ಮಾತ್ರ ಊರಿಗೆ ಬರುತ್ತಿರುವುದರಿಂದ ನನಗೆ ಈ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ.

ಭಾಗ್ಯಮ್ಮ ಮತ್ತು ರಾಜೇಗೌಡರಿಗೆ 1,50,000/- ರೂ ಗಳ ಅವಶ್ಯಕತೆ ಇದ್ದಾಗ ನನ್ನ ತಾಯಿಯನ್ನು ಸಂಪರ್ಕಿಸಿದ್ದರು ಎಂದರೆ ಸುಳ್ಳು. ಅವರಿಗೆ ಹಣದ ಅವಶ್ಯಕತೆ ಇದ್ದುದ್ದರಿಂದ ನನ್ನ ತಾಯಿ ಬಡ್ಡಿಗಾಗಿ 1,50,000/- ರೂ ಗಳನ್ನು ಸಾಲವಾಗಿ ನೀಡಿದ್ದರು ಎಂದರೆ ಸುಳ್ಳು. ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ದಿನವೇ ನಾವು ಪ್ರತಿವಾದಿಗೆ ಹಣ ನೀಡಿದ್ದೆವು. ದಿಃ 20-04-2019 ರಂದು ಕ್ರಯದ ಕರಾರು ಮಾಡಿಕೊಂಡಿದ್ದೆವು. ಅದೇ ದಿನ ಕ್ರಯದ ಕರಾರು ನೊಂದಣಿ ಮಾಡಿಕೊಳ್ಳಲಾಗಿತ್ತು. ನಾವು ಪ್ರತಿವಾದಿಯರಿಗೆ 1,50,000/- ರೂ ನಗದು ರೂಪದಲ್ಲಿ ಮತ್ತು 1,50,000/- ರೂ ಚೆಕ್ ರೂಪದಲ್ಲಿ ನೀಡಿದ್ದೆವು. ನಾವು ಚೆಕ್ ರೂಪದಲ್ಲಿ ಹಣವನ್ನು ನೀಡಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ಹಣವನ್ನು ನಾವು ಪ್ರತಿವಾದಿಯರಿಗೆ ನೀಡಿಲ್ಲ ಎಂದರೆ ಸುಳ್ಳು. ಚೆಕ್ ರೂಪದಲ್ಲಿ ಇರುವ 1,50,000/- ರೂ ಗಳನ್ನು ಹೊರತುಪಡಿಸಿ ಬೇರೆ ಯಾವುದೇ ಹಣವನ್ನು ನಮ್ಮ ತಾಯಿ ಪ್ರತಿವಾದಿಯರಿಗೆ ನೀಡಿಲ್ಲ ಎಂದರೆ ಸುಳ್ಳು.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.